ವಿಜಯವಾಣಿ, ದಿನಪತ್ರಿಕೆ : ದಿನಾಂಕ ೪/೦೪/೨೦೧೨ : ಪ್ರಜಾವಾಣಿ ದಿನಪತ್ರಿಕೆ ೫/೪/೧೨

# ಸಾವಿನಲ್ಲೂ ಸಾರ್ಥಕತೆ ಮೆರೆದ ಶಿವಣ್ಣ

■ ವಿಜಯವಾಣಿ ಸುದ್ದಿಜಾಲ ರೋಣ

ಪಟ್ಟಣದ ವೃದ್ಧರೊಬ್ಬ ದೇಹದಾನ ಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ನ್ಯಾಯಾಂಗ ಇಲಾಖೆಯಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಟ್ಟಣದ ಕಲ್ಯಾಣ ನಗರದ ನಿವಾಸಿ 72 ವರ್ಷದ ಶಿವಣ್ಣ ಬೆನಹಾಳ ಅವರು ದೇಹದಾನ ಮಾಡಿದವರು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಬುಧವಾರ ಸಂಜೆ ಮೃತಪಟ್ಟಿದ್ದಾರೆ. ಮರಣದ ನಂತರ ತಮ್ಮ ದೇಹವನ್ನು ವೈದ್ಯಕೀಯ ಕಾಲೇಜ್‌ಗೆ ದಾನ ಮಾಡಲು ಬಯಸಿದ್ದರು. ಈ ಕುರಿತು ಪತ್ನಿ ಅನ್ನಪೂರ್ಣ ಹಾಗೂ ಪುತ್ರ ಬಸವರಾಜ ಬೆನಹಾಳ ಅವರು ರೋಣ ಪಟ್ಟಣದ ರಾಜೀವಗಾಂಧಿ ಆಯುರ್ವೇದಿಕ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ ದೇಹ ದಾನ ಮಾಡಿದ್ದಾರೆ.

ಈ ವೇಳೆ ಮಾತನಾಡಿದ ರಾಜೀವಗಾಂಧಿ ಆಯುರ್ವೇದಿಕ್ ಮಹಾವಿದ್ಯಾಲಯದ ಪ್ರಾಚಾರ್ಯ ಡಾ ಐ.ಬಿ. ಕೊಟ್ಟೂರಶೆಟ್ಟರ್, 'ಶಿವಣ್ಣ ಬೆನಹಾಳ ಅವರ ಅಂತಿಮ ಆಸೆಯನ್ನು ಅವರ ಕುಟುಂಬದವರು ಈಡೇರಿಸಿದ್ದಾರೆ. ದೇಹದಾನದ ಮಹತ್ವ ಕುರಿತು ಸಾರ್ವಜನಿಕರಿಗೆ ತಿಳಿಸಿದ್ದಾರೆ. ಮೂಢನಂಬಿಕೆಯಿಂದಾಗಿ ಬಹುತೇಕರು ದೇಹ ಮತ್ತು ಅಂಗಾಂಗ ದಾನ ಮಾಡಲು ಮುಂದೆ ಬರುವುದಿಲ್ಲ. ಆದರೆ, ಮನುಷ್ಯರಾದವರು ಸಾವಿನ ನಂತರವೂ ಇನ್ನೊಬ್ಬರ ಜೀವನದಲ್ಲಿ ಬೆಳಕು ತರಬೇಕೆಂದರೆ ಅಂಗಾಂಗ ದಾನ ಬಹುಮುಖ್ಯ. ಕಣ್ಣು, ಕಿಡ್ನಿ, ಲಿವರ್, ಹೃದಯ, ಚರ್ಮ ಏನು ಬೇಕಾದರೂ ದಾನ ಮಾಡಬಹುದು. ಜನರು ತಪ್ಪು ತಿಳಿವಳಿಕೆ ಬಿಟ್ಟು ದೇಹ ಮತ್ತು ಅಂಗಾಂಗ ದಾನಕ್ಕೆ ಪ್ರತಿಯೊಬ್ಬರೂ ಮುಂದಾಗಬೇಕು' ಎಂದರು. ಮೃತರ ಆತ್ಮಕ್ಕೆ ಶಾಂತಿ ಕೋರಿ ಸ್ಥಳೀಯ ನಾಗರಿಕರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಪ್ರಾರ್ಥನೆ ಸಲ್ಲಿಸಿದರು.

» ರೋಣ ರಾಜೀವಗಾಂಧಿ ಆಯುರ್ವೇದಿಕ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ ದೇಹ ದಾನ



ಶಿವಣ್ಣ ಬೆನಹಾಳ

## ದೇಹದಾನ

ರೋಣ : ಪಟ್ಟಣದ ನಿವಾಸಿ ಶಿವಣ್ಣ ಬೆನಹಾಳ ಇವರ ಜೀವಿತಾವಧಿಯ ಇಚ್ಛೆಯಂತೆ ಅವರ ಮೃತ ದೇಹವನ್ನು ರಾಜೀವಗಾಂಧಿ ಶಿಕ್ಷಣ ಸಂಸ್ಥೆಯ ಆಯುರ್ವೇದಿಕ್ ಕಾಲೇಜಿಗೆ ದಾನ ಮಾಡಲಾಯಿತು.

ದಿ. 20-4-2012 ರಂದು ಕುಟುಂಬ ಮತ್ತು ಶಿಕ್ಷಕರ ಸಹಮತದಿಂದ ಕಾನೂನು ಬದ್ಧವಾಗಿ ದಾನ ನೀಡಿದ ಪತ್ರ ಕೊಟ್ಟಿರುತ್ತಾರೆ. ಅದರಂತೆ ಇಂದು ವಯೋರೋಗದಿಂದ ವ್ಯಕ್ತಿ ಮರಣ ಹೊಂದಿದ್ದು, ಅವರ ಕುಟುಂಬದವರು

ಮೃತ ಶರೀರವನ್ನು ಬುಧವಾರ ಕಾಲೇಜು ಪ್ರಾಚಾರ್ಯ ವೈ.ಬಿ. ಕೊಟ್ಟೂರಶೆಟ್ಟರ ಅವರಿಗೆ ನೀಡಿದರು.

## ನಿಧನ ವಾರ್ತೆ

### ಕೃಷ್ಣಾಚಾರ್ಯ ಕಟ್ಟಿ



ಹನುಮಸಾಗರ (ತಾ:ಕುಷ್ಟಗಿ): ಹನುಮಸಾಗರದ ಬ್ರಾಹ್ಮಣ ಸಮಾಜದ ಹಿರಿಯರು, ಗ್ರಾ.ಪಂ ಮಾಜಿ ಸದಸ್ಯ, ಅಭಿನವ ತಿರುಪತಿ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದ ಟ್ರಸ್ಟಿ ಕೃಷ್ಣಾಚಾರ್ಯ ರಾಮಕೃಷ್ಣಾಚಾರ್ಯ ಕಟ್ಟಿ (70) ನಿಧನ ಹೊಂದಿದರು. ಅವರಿಗೆ ಪತ್ನಿ, ಮೂವರು ಪುತ್ರರು, ಅಪಾರ ಬಂಧು ಬಳಗ ಇದೆ.

ಸಂತಾಪ: ಕೃಷ್ಣಾಚಾರ್ಯ ಅವರ ನಿಧನಕ್ಕೆ ಜನಪ್ರತಿನಿಧಿಗಳು, ಮುಖಂಡರು, ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಲಿಂಗಾಯತ, ಕುರುಬ ಸಮಾಜಗಳು ಸೇರಿದಂತೆ ವಿವಿಧ ಸಮಾಜದ ಗಣ್ಯರು, ಸಾರ್ವಜನಿಕರು ಸಂತಾಪ ಸೂಚಿಸಿದ್ದಾರೆ.

